# ನೀವು ಕೇಳಿದಿರಿ?

ಕೆ.ವಿ.ಶಿವಕುಮಾರ್ ಕಾಲೀಹುಂಡಿ, ಮೈಸೂರು
*ಸರಳ ಜೀವನ ರೂಢಿಸಿಕೊಂಡವರು ವಿರಳವಾಗುತ್ತಿದ್ದಾರಲ್ಲಾ ರಾಮ್‌ಜೀ?*



ಅದು ಒಲ್ಡ್ ಫ್ಯಾಷನ್ಡ್ ಸರ್; ಈಗಿನದು ಸರಳುಗಳ ಹಿಂದಿನ ಜೀವನಕ್ಕೆ 'ರೌಡಿ'ಸಿಕೊಳ್ಳುವುದು!

ಸಡ್ಲಪಲ್ಲಿ ರಾಮಕೃಷ್ಣ, ಮಾರುತಿನಗರ
*ಮನುಷ್ಯನಿಗೆ ಎಷ್ಟು ವಯಸ್ಸಿನ ತನಕ ಆಸೆ ಇರುತ್ತದೆ?*
ಹುಚ್ಚಪ್ಪ! ಪಂಕ್ಚುಯೇಷನ್ ಗೊತ್ತಿಲ್ಲವೇ ನಿಮಗೆ? ಕಾಮವೇ ಬೇರೆ, ಫುಲ್‌ಸ್ಟಾಪೇ ಬೇರೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ನೀರನ್ನು ತಿನ್ನಿರಿ, ಅನ್ನವನ್ನು ಕುಡಿಯಿರಿ ಎನ್ನುತ್ತಾರಲ್ಲಾ, ಇದು ಎಷ್ಟು ಸಮಂಜಸ?*
ನೀರಿನಲ್ಲಿ ಅಷ್ಟು ಮಾಲಿನ್ಯ, ಅಡಿಗೆಯಲ್ಲಿ ಅಷ್ಟು ನಿರುತ್ಸಾಹ ಇದ್ದಾಗ ಇದೇ ಸಮಂಜಸ!

ಸೋಮಶೇಖರ್, ಎಲೆಮುದ್ದನಹಳ್ಳಿ
*ಪತ್ರಿಕೆಗಳಲ್ಲಿ ವಿಷಯಗಳಿಗಿಂತ ಜಾಹಿರಾತುಗಳೇ ಅಧಿಕವಾಗಿರುತ್ತದಲ್ಲಾ...?*




10 ಗ್ರಾಂ ಉಂಗುರಕ್ಕೆ 100 ಗ್ರಾಂ ಬಾಕ್ಸ್ ಇರುವುದಿಲ್ಲವೇ! ಇದೂ ಹಾಗೆಯೇ!

ಎಂ.ಎಸ್. ಸೋಮಶೇಖರ್, ಮೈಸೂರು
*ಇಂದ್ರನಿಗೂ, ಚಂದ್ರನಿಗೂ ಏನು ಸಂಬಂಧ?*
ಮೋಡಗಳದ್ದೇ! ಇಂದ್ರ ಅವುಗಳ ಮಾಲಿಕ, ಚಂದ್ರ ಪ್ರಯಾಣಿಕ!

ಜಯದೇವ ಹಲಕಿ, ಗೋಕಾಕ
*'ಏನು' ಎಂದರೇನು?*
ಏ – ಏತಕ್ಕಾಗಿ ನು – ನುಡಿಯುತ್ತಿರುವೆ?

ಅನಿತಾ ನರೇಶ್ ಮಂಚಿ, ಮಂಚಿ
*ಜಾಣ ಕಿವುಡು, ಜಾಣ ಕುರುಡು ಈ ರೋಗಗಳಿಗೆ ಯಾವ ಡಾಕ್ಟರ್ ಬಳಿ ಔಷಧವಿದೆ ಹೇಳಿ?*
ಕ್ಷಮಿಸಿ; ಇದು ರೋಗವಲ್ಲ, ಔಷಧಿ! ಜನರೇಷನ್ ಗ್ಯಾಪ್ ಖಾಯಿಲೆಗೆ ಇದೇ ಸಿದ್ಧೌಷಧ!

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಕನ್ನಡಸೇವೆಯನ್ನು ಸದ್ದು ಮಾಡದೆ ಮತ್ತು ಸದ್ದು ಮಾಡುತ್ತಾ ಮಾಡುವುದಕ್ಕೆ ಉದಾಹರಣೆಗಳಾವುವು?*
ಹಿರೇಮಗಳೂರು ಕಣ್ಣನ್, ರಕ್ಷಣಾ ಪಡೆಗಳು.

ಪಿ.ಜೆ. ರಾಘವೇಂದ್ರ, ಮೈಸೂರು
*ದುಡಿದು ಬೆವರು ಸುರಿಸುವವರಿಗೂ, ಜಿಮ್‌ಗೆ ಹೋಗಿ ಬೆವರು ಸುರಿಸುವವರಿಗೂ ಏನು ವ್ಯತ್ಯಾಸ ರಾಮ್?*
ಒಬ್ಬನದು ಸಾರ್ಥಕವಾದ ಜಿಮ್ಮೇದಾರಿ, ಮತ್ತೊಬ್ಬನದು ಸ್ವಾರ್ಥಕ್ಕೆ ಜಿಮ್ಮೇ ದಾರಿ!

ಡೈರಿ ವಿಶ್ವನಾಥ್, ಬೆಂಗಳೂರು
*ಸಪ್ತಪದಿ ಏಕೆ?*
ಬೇಡ ಬಿಡಿ. ಹೆಜ್ಜೆ ಎಷ್ಟಿಟ್ಟರಿ ಎನ್ನುವುದು ಮುಖ್ಯವಲ್ಲ, ಎಷ್ಟು ದೃಢವಾಗಿಟ್ಟರಿ ಎಂಬುದು ಮುಖ್ಯ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಅಲ್ರೀಯಪ್ವಾ, ಜ್ಯೋತಿಷ್ಯ, ಮೂಢನಂಬಿಕೆಗಳನ್ನು ನಂಬಬೇಕಾ?*
ನಂಬಿ ಪರವಾಯಿಲ್ಲ. ಅವು ಆಶ್ವಾಸನೆಗಳಷ್ಟು ಅಪಾಯಕರವಲ್ಲ!

ಅಮರಯ್ಯ, ಪತ್ರಿಮಠ, ಶೋರಾಪೂರ
*ಮೋಹಿನಿಕಾಟಕ್ಕೂ, ಶನಿಕಾಟಕ್ಕೂ ಇರುವ ವ್ಯತ್ಯಾಸವೇನು?*
ಶನಿಕಾಟ ಜಾತ್ಯತೀತ, ಲಿಂಗಾತೀತ; ಮೋಹಿನಿಕಾಟ ಫಾರ್ ಮೆನ್ ಓನ್ಲಿ!

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ನಿಮ್ಮ ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನಿಮಗೆ ಅದೆಷ್ಟು ರೂಪಾಯಿ?*
ಹಾಗೆಲ್ಲಾ ಲೆಕ್ಕ ಹಾಕಲಾಗದು ಬಿಡಿ. ಅವಳ ಕರೆ ಕರೆನ್ಸಿಯನ್ನೂ ಮೀರಿದ್ದು!

## ಬಹುಮಾನಿತ ಪ್ರಶ್ನೆ

ನವಿರವಿ, ಬಾಳೆಹೊನ್ನೂರು
*ಕಂಬಳಿಹುಳು ಕನ್ನಡದ್ದೋ, ಇಂಗ್ಲಿಷ್‌ದೋ?*
ಮೈ ಭರ್ತಿ ರಗ್ ಹೊದ್ದುಕೊಂಡು ಬಿದ್ದಲ್ಲೇ ಬಿದ್ದಿರುವುದರಿಂದ ಕನ್ನಡದ್ದಷ್ಟೇ ಅಲ್ಲ, ಕರ್ನಾಟಕ ಸರ್ಕಾರದ್ದು!

ಎಸ್. ವಸಂತಾ, ಬೆಂಗಳೂರು
*ಕಡಿದ ಮರ ಚಿಗುರುವಂತೆ ಕಡಿದ ಸ್ನೇಹ ಚಿಗುರುವುದಿಲ್ಲವೇಕೆ ಸ್ವಾಮಿ?*
ಕಾದ ಸೀಸ ಬಿದ್ದಿರುತ್ತದಲ್ಲ!

ಶಿಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ಜೀವನವೆಂದರೆ ಬರೀ ಹೊಂದಾಣಿಕೇನಾ ಸಾರ್?*
ಶುದ್ಧ ತಪ್ಪು; ಎಲ್ಲರೂ ಹೊಂದಿಕೊಂಡುಹೋದರೆ ಸುಪಾರಿಯವರು ಹೇಗೆ ಬದುಕಿಯಾರು!

ಎಂ.ಎಸ್. ಸೋಮಶೇಖರ್, ಮೈಸೂರು
*ಐದು ಮತ್ತು ಏಳು ತಲೆಗಳ ಸರ್ಪಗಳು ಭೂಮಿಯ ಮೇಲೆ ನಮಗೇಕೆ ಕಾಣುತ್ತಿಲ್ಲ?*



ಅಧಿಕಾರದ ಹುತ್ತದೊಳಗೆ ಸೇರಿಕೊಂಡಿರಬಹುದೆ?

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಸೂಜಿಗೂ, ಗುಂಡುಸೂಜಿಗೂ ಏನು ವ್ಯತ್ಯಾಸ ರಾಮ್‌ಜಿ?*
ಸೂಜಿ ದಾರ ಮುಗಿಯುವವರೆಗೆ ಜೊತೆಯಿರುವ ಭಾರತೀಯ ನಾರಿ; ಗುಂಡುಸೂಜಿ ಜೊತೆಗಾರರನ್ನು ಬದಲಿಸುವ ವಿದೇಶಿ ನಾರಿ.

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ
*ಆಸ್ತಿಕ, ನಾಸ್ತಿಕ ಇವರುಗಳಿಗಿರುವ ವ್ಯತ್ಯಾಸವೇನು?*
ಆಸ್ತಿಕ ಗೂಟಕ್ಕೆ ಕಟ್ಟಿದ ಎತ್ತು; ನಾಸ್ತಿಕ ಅಲೆಮಾರಿ ಎತ್ತು!

■ ರಾಮ್